ಗೈರ್ವಿಲಾ ಆದ

ಬಲಭಾಗದ ಕರ್ಟೆಸಿನೋಟ್‌ಗಳ

ನಂಬರ್	ಸರ್ಕಲ್	ಕ್ರಯ.	
B. 90—30886	,,	ರೂ. 20	ಹಕ್ಕುದಾರ—ಕ್ಲೋಸೆಟ್ಟೆ ಕಸಬಾ ಸ್ಟ್ಯಾಂಪ್‌ವೆಂಡರ್ ಭೀಮರಾವ್.
B. 82—91553	,,	,, 20	

ನೋಟೀಸ್.

ಕೊಡಗು ಫಾರೆಸ್ಟ್ಸ್ ಡಿಪ್ಯೂಟಿ ಸರ್ವೇಯರ್ ಆಫೀಸಿನಿಂದ.

ತಾರೀಖು 29ನೇ ನವಂಬರ್ 1886ನೇ ಇಸವಿ.

ಸ್ ೧೮೮೭ನೇ ಇಸವಿ ಜನವರೀ ತಾರೀಖು 13ನೇ ದಿನ ಫ್ರೇಜರ್‌ಪೇಟೆಲಿ 80 ಟ್ ಗಂಧ ಹರಾಜು ಹಾಕಲ್ಪಡುತ್ತದೆ.

ಪರತ್ತು—ಸ್ ೧೮೮೬ನೇ ಇಸವಿ ಜನವರೀ ತಾರೀಖು 3ರ ಕೊಡಗು ಡಿಸ್ಟ್ರಿಕ್ಟ್ ಗೆಜೆಟ್‌ನಲ್ಲಿ ಫಾಯಿಷ್ ಮೂಡೋಣಾದ ಸ್ ೧೮೮೧ನೇ ಇಸವಿ ಫಿಬ್ರವರೀ ತಾರೀಖು 15, ನಂಬರು 26ರ ಕೊಡಗು ಚೀಫ್ ಕಮ್ಮಿಷನರ್ ಸಾಹೆಬರವರ ಇಸ್ತಿಹಾರ್‌ನಲ್ಲಿ ನಮೂದಿರುವ ಮೇರೆ.

ಗಂಧದ ಕ್ರಯವನ್ನು ಸ್ ೧೮೮೭ನೇ ಇಸವಿ ಮಾರ್ಚೀ ತಾರೀಖು 25ರ ವಳಗೆ ಸಾಕಲ್ಯವಾಗಿ ಪಾವತಿ ಮಾಡತಕ್ಕದ್ದು.

ಕೆ. ರಾಮರಾವ್,
ಫಾರ್ ಡಿಪ್ಯೂಟಿ ಸರ್ವೇಯರ್.

ಕ್ರಿಸ್ಟಲ್ಲೈನ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ಮೆಂಟ್ ಕೋಠಿಯಲ್ಲಿ ಕೆಂಪುವರ್ಣದ ಸಿಂಕೋನಾ ಪಟ್ಟೆಯಿಂದ ತಯಾರ್‌ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾದ ತಯಾರಿ—ಇದು ಸಾಧಾರಣವಾಗಿ ಕ್ರಿಸ್ಟಲ್ಲೈಜ್ಡ್ ಅಲ್ಲದ ಫೆಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾಗಿ ಪ್ರತಿನಿಧಿಯಾಗಿದೆ. ಇದನ್ನು ಕಲ್‌ಕತ್ತೆ ಬಳಿ ಸೀಬ್‌ಪೂರ್ ಸಮಿಪದಲ್ಲಿ ರಾಯಲ್‌ಬೊಟಾನಿಕಲ್ ಗಾರ್ಡ್ನ್ ಸೂಪರ್‌ಟೆಂಡೆಂಟ್‌ರಿಂದ ಗವರ್ಮೆಂಟ್ ಆಫಿಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಬಂದು ಸಲಕ್ಕೆ ಇಪ್ಪತ್ತು ಪೌಂಡ್ ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಬಂದಕ್ಕೆ 24 ರೂಪಾಯಿಗಳ ದರ ಪ್ರಕಾರ ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕಲ್ ಗಾರ್ಡ್ನ್ ಸೂಪರ್‌ಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್‌ಬಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯರ್ಸ್ ಮತ್ತು ನೇಟಿವ್ ಡಗ್ಗಿಸ್ಟರಿಗಳಿಗೂ ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನಿಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ನ ಧರ್ಮಾರ್ಥವಾಗಿ ಗವರ್ಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡ್ನ್‌ಸೂಪರ್‌ಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ 4—8—0; ಎಂಟು ಔನ್ಸ್‌ವುಳ್ಳ ಡಬ್ಬಿ ರೂ. 8—8—0; ಬಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡ್ನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದ; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌಂವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ಸ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀ ಎಂಟು ಆಣೆ ಟಪ್ಪಾಲ್ ಹಾಸಲೂ, ಬಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Government Press, Bangalore.—1886.